ನಿಯಮ - 72
ಕ್ರಮಸಂಖ್ಯೆ - 69

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 252 ಐಎಪಿ(ಇ) 2021

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 03.01.2022.

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಸಂಖ್ಯೆ: ಕವಿಪ/ಪ್ರಶಾ/69/145ನೇಅ/ನಿ-72/2021, ದಿನಾಂಕ: 06.12.2021.

---*---

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರದ 10 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಎನ್. ಕುಮಾರ್

(ಎನ್. ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72ರಡಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ

- - o - -

ವಿಷಯ

ಕೆ.ಐ.ಎ.ಡಿ.ಬಿ. ಕೇಂದ್ರ ಕಛೇರಿ ಹಾಗೂ ಮೈಸೂರು ವಲಯ ಕಛೇರಿಯಲ್ಲಿ ನಿಯಮಬಾಹಿರವಾಗಿ ಪ್ಲಾಟ್ ನಂ: 58, ಹೆಬ್ಬಾಳ 2ನೇ ಹಂತ, ಮೈಸೂರು ಇಲ್ಲಿನ ಮೆ: ಆಪ್ಟೋ ಸರ್ಕ್ಯೂಟ್ ಸಂಸ್ಥೆಗೆ ಸೇರಿದ ಜಮೀನನ್ನು ಮೆ: ಬೆಸ್ಟ್ ಕೋರ್ಗೇಟೆಡ್ ಸಂಸ್ಥೆಗೆ ನಿಯಮಬಾಹಿರವಾಗಿ 5 ಎಕರೆ ನಿವೇಶನ ಹಂಚಿಕೆ ಮಾಡಿ, ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ಉಂಟು ಮಾಡಿದ್ದು, ಸಾರ್ವಜನಿಕ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಉಂಟಾಗಿರುವ ಗಂಭೀರ ಸಮಸ್ಯೆಯ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಉತ್ತರ

ದಿನಾಂಕ: 19.09.2005ರಂದು ನಡೆದ 13ನೇ SLSWCC ಸಮಿತಿ ಸಭೆಯ ನಿರ್ಣಯದಂತೆ ಮೆ॥ ಆಪ್ಟೋ ಸರ್ಕ್ಯೂಟ್ (ಇಂಡಿಯಾ) ಲಿ.ರವರ Medical Equipment Project ಗಾಗಿ ಮಂಡ್ಯ ಜಿಲ್ಲೆ, ಹೆಬ್ಬಾಳು 2ನೇ ಹಂತ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ 58ರ 20234 ಚ.ಮೀ. ವಿಸ್ತೀರ್ಣದ ಜಮೀನನ್ನು ತಾತ್ಕಾಲಿಕ ದರ ಪ್ರತಿ ಎಕರೆಗೆ ರೂ.16.00 ಲಕ್ಷದಂತೆ ದಿನಾಂಕ: 09.12.2005ರಂದು ಹಂಚಿಕೆ ಪತ್ರ ಮತ್ತು ದಿನಾಂಕ: 03.07.2006ರಂದು ಸ್ವಾಧೀನಪತ್ರ ಹಾಗೂ ದಿನಾಂಕ: 07.07.2006ರಂದು ಗುತ್ತಿಗೆ ಕರಾರು ಪತ್ರವನ್ನು ಮಾಡಿಕೊಡಲಾಗಿದೆ ಹಾಗೂ ಹಂಚಿಕೆಯಾದ ಜಮೀನಿನ ಪೈಕಿ 10076.64 ಚ.ಮೀ. ಜಮೀನಿಗೆ ದಿನಾಂಕ: 10.10.2006ರಂದು ನಕ್ಷೆ ಅನುಮೋದನೆ ನೀಡಲಾಗಿದೆ.

ಯೋಜನೆಯನ್ನು ಅನುಷ್ಠಾನಗೊಳಿಸಲು ದಿನಾಂಕ: 19.10.2011ರವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದ್ದು, ಹಂಚಿಕೆಯಾದ ಜಮೀನಿನ ಭೂಮಾಲೀಕರು ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 22246/2005 C/w 20195/2005 & 1937/2007 ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯದ SLA ಸಂಖ್ಯೆ: 19126-27/2011 ರ ಪ್ರಕರಣಗಳು ಕ್ರಮವಾಗಿ ದಿನಾಂಕ: 16.12.2010 ಮತ್ತು 18.01.2016ರಂದು ವಜಾಗೊಂಡಿದ್ದು, ಆಪ್ಟೋ ಸರ್ಕ್ಯೂಟ್ ಕಂಪನಿಯ ಮನವಿಯ ಮೇರೆಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ದಿನಾಂಕ: 23.08.2018ರವರೆಗೆ ಹೆಚ್ಚುವರಿ ಕಾಲಾವಕಾಶವನ್ನು ಹಾಗೂ 1017 ಚ.ಮೀ. ವಿಸ್ತೀರ್ಣಕ್ಕೆ ಪರಿಷ್ಕೃತ ಕಟ್ಟಡ ನೀಲಿ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಆಪ್ಟೋ ಸರ್ಕ್ಯೂಟ್ ಕಂಪನಿಯು ಕೆ.ಐ.ಎ.ಡಿ.ಬಿ.ಗೆ ಸಲ್ಲಿಸಿದ ದಿನಾಂಕ: 18.09.2018ರ ಮನವಿಯಲ್ಲಿ ಅನುಮೋದಿತ ನಕ್ಷೆಯಂತೆ ಕಟ್ಟಡ ನಿರ್ಮಾಣ ಮಾಡಿದ್ದು, ಕೈಗಾರಿಕಾ ಚಟುವಟಿಕೆಯನ್ನು ಪ್ರಾರಂಭಿಸಲು ಹೆಚ್ಚುವರಿ ಕಾಲಾವಕಾಶ ಕೋರಿದ್ದರ ಮೇರೆಗೆ ದಿನಾಂಕ: 01.04.2019ರವರೆಗೆ ಹೆಚ್ಚುವರಿ ಕಾಲಾವಕಾಶ ನೀಡಲಾಗಿದೆ.

ಕಾರ್ಯಪಾಲಕ ಅಭಿಯಂತರ, ಕೆ.ಐ.ಎ.ಡಿ.ಬಿ., ಮೈಸೂರು ಇವರ ದಿನಾಂಕ: 03.09.2020ರ ವರದಿಯಲ್ಲಿ ಹಂಚಿಕೆದಾರರು ಶೇಕಡಾ 4.64 ರಷ್ಟು ಜಮೀನನ್ನು ಉಪಯೋಗಿಸಿಕೊಂಡಿದ್ದ ಕಾರಣ, ದಿನಾಂಕ: 12.11.2020ರಂದು ಆಪ್ಟೋ ಸರ್ಕ್ಯೂಟ್.ರವರಿಗೆ ಕೆ.ಐ.ಎ.ಡಿ. ಕಾಯ್ದೆ 1966ರ ಕಲಂ 34-ಬಿ ರಡಿ ನೋಟೀಸ್ ನೀಡಿದ್ದು, ಕಂಪನಿಯು ದಿನಾಂಕ: 05.02.2021ರಂದು ವೈಯುಕ್ತಿಕ ವಿಚಾರಣೆಗೆ ಹಾಜರಾಗಿ, ಹಂಚಿಕೆ ಪಡೆದ ಜಮೀನಿನಲ್ಲಿ ಯೋಜನೆ ಅನುಷ್ಠಾನಗೊಳಿಸಲು ರೂ.3.48 ಕೋಟಿಗಳನ್ನು ವೆಚ್ಚ ಮಾಡಿದ್ದು, ಈ ಜಮೀನಿನಲ್ಲಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸಲು ಕ್ರಮ ಕೈಗೊಂಡಿರುವುದಾಗಿ ತಿಳಿಸುತ್ತಾ, ಹಂಚಿಕೆಯಾದ ಜಮೀನಿನ ಭೂಮಾಲೀಕರು ನ್ಯಾಯಾಲಯದಲ್ಲಿ ದಾಖಲಿಸಿದ್ದ ಪ್ರಕರಣಗಳಿಂದಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ವಿಳಂಬವಾದ ಕಾರಣ, ಹೆಚ್ಚಿನ ಕಾಲಾವಕಾಶ ನೀಡುವಂತೆ ಕೋರಿದ್ದರ ಮೇರೆಗೆ, ದಿನಾಂಕ: 15.02.2021ರಂದು ಅಂತಿಮವಾಗಿ ಶೇಕಡಾ 10ರಷ್ಟು ದಂಡದ ಮೊತ್ತ ರೂ.6,80,000/-ಗಳನ್ನು ಪಾವತಿಸಿಕೊಳ್ಳುವ ಷರತ್ತಿಗೆ ಒಳಪಟ್ಟು 12 ತಿಂಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲಾಗಿದೆ ಹಾಗೂ ದಂಡದ ಮೊತ್ತ ಪಾವತಿಸುವಂತೆ ಕೋರಿ ಆಪ್ಟೋ ಸರ್ಕ್ಯೂಟ್‌ರವರಿಗೆ ದಿನಾಂಕ: 18.02.2021ರಂದು ಪತ್ರ ಬರೆಲಾಗಿದೆ.

ಆಪ್ಟೋ ಸರ್ಕ್ಯೂಟ್ ಕಂಪನಿಯು ದಿನಾಂಕ: 24.05.2021ರಂದು ಮಂಡಳಿಗೆ ಬರೆದ ಪತ್ರದಲ್ಲಿ ತಮಗೆ ಹಂಚಿಕೆಯಾಗಿರುವ ಜಮೀನಿನ ಗುತ್ತಿಗೆ ಹಕ್ಕನ್ನು ಮೆ॥ ಬೆಸ್ಟ್ ಕಾರುಗೇಟರ್ಸ್ ಇವರಿಗೆ ವರ್ಗಾಯಿಸಲು ಕೋರಿದ್ದು, ಕಾರ್ಯಪಾಲಕ ಅಭಿಯಂತರ, ಕೆ.ಐ.ಎ.ಡಿ.ಬಿ., ಮೈಸೂರು ಇವರ ದಿನಾಂಕ: 21.06.2021ರ ವರದಿಯಲ್ಲಿ ಹಂಚಿಕೆಯಾದ ಜಮೀನಿನಲ್ಲಿ ಶೇಕಡಾ 4.64ರಷ್ಟು ಜಮೀನನ್ನು ಕಟ್ಟಡ ನಿರ್ಮಾಣಕ್ಕಾಗಿ ಹಾಗೂ ಶೇಕಡಾ 28.99ರಷ್ಟು ಜಮೀನನ್ನು ರಸ್ತೆ, ಉದ್ಯಾನವನ ಹಾಗೂ ವಾಹನ ನಿಲುಗಡೆಗಳನ್ನು ಒಳಗೊಂಡಂತೆ ಒಟ್ಟು ಶೇಕಡಾ 33.63ರಷ್ಟು ಜಮೀನನ್ನು ಉಪಯೋಗಿಸಿರುವುದಾಗಿ ತಿಳಿಸಿರುತ್ತಾರೆ.

ಆಪ್ಟೋ ಸರ್ಕ್ಯೂಟ್ ಕಂಪನಿಯು ಸದರಿ ಜಮೀನಿನಲ್ಲಿ ಹೂಡಿರುವ ಬಂಡವಾಳದ ಕುರಿತು ಚಾರ್ಟೆಡ್ ಅಕೌಂಟೆಂಟ್ ಇವರಿಂದ ಪ್ರಮಾಣೀಕರಿಸಿ ಸಲ್ಲಿಸಿದ ಬಂಡವಾಳ ಹೂಡಿಕೆ ಪ್ರಮಾಣ ಪತ್ರವನ್ನು ಕೆ.ಐ.ಎ.ಡಿ.ಬಿ.ಯ ಆಂತರಿಕ ಲೆಕ್ಕ ಪರಿಶೋಧನಾ ವಿಭಾಗದಲ್ಲಿ ಪರಿಶೀಲಿಸಿ, ಹಂಚಿಕೆದಾರರಿಂದ

ರೂ.2,11,18,665/-ಗಳನ್ನು ಪಾವತಿಸಿಕೊಂಡು, ಗುತ್ತಿಗೆ ಹಕ್ಕನ್ನು ವರ್ಗಾಯಿಸಲು ಕ್ರಮ ವಹಿಸಲು ದಿನಾಂಕ: 05.07.2021ರಂದು ತಿಳಿಸಿರುತ್ತಾರೆ.

ಆಪ್ಟೋ ಸರ್ಕ್ಯೂಟ್ ಕಂಪನಿಗೆ ಹಂಚಿಕೆ ಮಾಡಿರುವ ಸಮಯದಲ್ಲಿನ ಗುತ್ತಿಗೆ ಹಕ್ಕಿನ ವರ್ಗಾವಣೆ ಕುರಿತು ಪಾಲಿಸಬೇಕಾದ ನಿಯಮಗಳು ಈ ಕೆಳಕಂಡಂತಿದೆ:-

a) 25% of difference between the allotted price and the price in vogue, at the time of considering such requests, if the cost of land allotted is less than 20% of the investment made on the project excluding the land cost, which should be evidenced by a certificate from the Financial Institutions or from the Chartered Accountants;

b) 75% of the difference between the allotted price and the price in vogue at the time of considering such requests if the cost of land allotted is more than 20% of the investment made on the project excluding in the land cost, which should be evidenced by a certificate from the Financial Institutions or from the Chartered Accountants;

c) 10% of the land cost paid by the original allottee as transferring charges;

ಹಂಚಿಕೆ ಪತ್ರದ Standard Conditions-10 ರಂತೆ ಹಕ್ಕು ವರ್ಗಾವಣೆ ನಿಯಮ-10(ಎ) ರಡಿ ರೂ.2,11,18,665/-ಗಳನ್ನು ಪಾವತಿಸಿಕೊಂಡು, ಮೆ॥ ಬೆಸ್ಟ್ ಕಾರುಗೇಟರ್ಸ್ ಇವರಿಗೆ ಗುತ್ತಿಗೆ ಹಕ್ಕನ್ನು ವರ್ಗಾವಣೆ ಮಾಡಲು ಅನುಮೋದನೆ ನೀಡಿ, ಹಂಚಿಕೆದಾರರಿಂದ ಸದರಿ ಮೊತ್ತವನ್ನು ಪಾವತಿಸಿಕೊಂಡು, ದಿನಾಂಕ: 29.07.2021ರಂದು ಗುತ್ತಿಗೆ ಕರಾರನ್ನು ಮಾಡಿಕೊಡಲಾಗಿದೆ.

ಮೆ॥ ಆಪ್ಟೋ ಸರ್ಕ್ಯೂಟ್ (ಇಂಡಿಯಾ) ಲಿ.ರವರಿಗೆ ಹಂಚಿಕೆ ಮಾಡಿರುವ ಮಂಡ್ಯ ಜಿಲ್ಲೆ, ಹೆಬ್ಬಾಳು 2ನೇ ಹಂತ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ 58ರಲ್ಲಿ 20234 ಚ.ಮೀ. ವಿಸ್ತೀರ್ಣದ ಜಮೀನಿನ ಗುತ್ತಿಗೆ ಹಕ್ಕನ್ನು ಕೆ.ಐ.ಎ.ಡಿ.ಬಿ.ಯ ಗುತ್ತಿಗೆ ಕರಾರಿನಲ್ಲಿ ಅಳವಡಿಸಿಕೊಂಡಿರುವ ಅಂಶಗಳನ್ವಯ ನಿಯಮಾನುಸಾರ ಪಾವತಿಸಿಕೊಳ್ಳಬೇಕಾದ ಗುತ್ತಿಗೆ ಹಕ್ಕು ವರ್ಗಾವಣೆ ಶುಲ್ಕವನ್ನು ಪಾವತಿಸಿಕೊಂಡು, ಮೆ॥ ಬೆಸ್ಟ್ ಕಾರುಗೇಟರ್ಸ್ ಇವರಿಗೆ ಗುತ್ತಿಗೆ ಹಕ್ಕನ್ನು ನಿಯಮಾನುಸಾರ ವರ್ಗಾವಣೆ ಮಾಡಲಾಗಿದೆ.

ಸಂಖ್ಯೆ: ಸಿಐ 252 ಐಎಪಿ (ಇ) 2021

(ಮುರುಗೇಶ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು